# ಪ್ರೀತಿ ಪೆಂಡೆಂಟ್!



ಸರ, ಹಾರಮ್‌ಗಳಿಗೆ ಸಖತ್ ಲುಕ್ ಕೊಡುವ ಪೆಂಡೆಂಟ್‌ಗಳು ಆಭರಣ ಲೋಕದಲ್ಲಿ ಮಹತ್ವದ ಸ್ಥಾನ ಪಡೆದಿವೆ. ಹಲವು ವಿಧದ ಪೆಂಡೆಂಟ್ ಖರೀದಿಸಿ ಒಂದೇ ಸರಕ್ಕೆ ಬೇರೆ ಬೇರೆ ಸಂದರ್ಭಗಳಲ್ಲಿ ಹಾಕಿ ಉಡುಪಿಗೆ ಒಡವೆ ಮ್ಯಾಚ್ ಮಾಡಿಕೊಳ್ಳಬಹುದು.

■ **ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರ: ಮುಳಿಯ ಕೇಶವ ಭಟ್ ಅಂಡ್ ಸನ್ಸ್

ಸರ ಸಪುರದ್ದೇ ಆಗಿರಲಿ, ದಪ್ಪದ್ದೇ ಆಗಿರಲಿ, ತುದಿಯಲ್ಲಿ ತೂಗಾಡುವ ಪೆಂಡೆಂಟ್ ಇಡೀ ಆಭರಣಕ್ಕೆ ಸಖತ್ ಲುಕ್ ಕೊಡುವಂಥದ್ದು. ಹೀಗಾಗಿ ಒಡವೆ ಲೋಕದಲ್ಲಿ ಪೆಂಡೆಂಟ್‌ಗೆ ಎಂದಿಗೂ ಅಗ್ರಸ್ಥಾನವೇ ಇದೆ.

ಆಭರಣ ಎಂದಾಕ್ಷಣ ಯಾರೇ ಆಗಲಿ ಒಮ್ಮೆ ಮೈಮನಸ್ಸು ಎರಡೂ ಪುಳಕಗೊಳ್ಳುತ್ತದೆ. ಆಭರಣ ಖರೀದಿಸುವಾಗ ಒಂದು ಖುಷಿಯಾದರೆ ಅದನ್ನು ತೊಟ್ಟುಕೊಳ್ಳುವಾಗ ಇನ್ನೊಂದು ಖುಷಿ. ಅದೇ ಆಭರಣ ನಮ್ಮ ಕಷ್ಟ ಕಾಲಕ್ಕೆ ಬಳಕೆಯಾದಾಗ ಸಾರ್ಥಕತೆಯ ಮನೋಭಾವವೂ ಉಂಟಾಗುತ್ತದೆ.

ಇಂದು ಆಭರಣ ಯಾವುದೇ ಆಗಲಿ ತೊಟ್ಟು ಕೊಂಡಾಗ ಇನ್ನ್ಯಾರ ಬಳಿಯೂ ಅದು ಇರಬಾರದು ಅದು ಹೊಸತನವನ್ನು ಹೊಂದಿರಬೇಕು. ಹಾಗಾಗಿ ಪೆಂಡೆಂಟ್‌ಗಳ ಮೊರೆ ಹೋಗಬಹುದು. ಏಕೆಂದರೆ ಪೆಂಡೆಂಟ್ ಸೆಟ್ ವಿಭಿನ್ನವಾದದ್ದು, ಉಡುಪಿಗೆ ಮ್ಯಾಚ್ ಆಗುವಂಥದ್ದನ್ನು ಆರಿಸಿ ಖರೀದಿಸಿ ಧರಿಸಬಹುದು. ಎಲ್ಲಾ ಬಟ್ಟೆ, ನಿತ್ಯ ಬಳಕೆಗೆ ಹೊಂದುವಂತಹದ್ದು ಇದು.

ಪೆಂಡೆಂಟ್ ಸೆಟ್‌ನ ಹಲವು ತರಹ. ಸರದಲ್ಲಿ ಪೋಣಿಸಿ ಧರಿಸುವಂತಹದ್ದು, ಎರಡು ಬದಿ ಹುಕ್ ಇರುವಂತಹದ್ದು, ಎರಡು ರಿಂಗ್ ಹೊಂದಿರುವಂತಹದ್ದು, ಬಾಲಾಜಿ ಹುಕ್ ಇರುವಂತಹದ್ದು... ಹೀಗೆ.

## ಸರದಲ್ಲಿ ಪೋಣಿಸಿ ಧರಿಸುವಂತಹದ್ದು

ಈ ರೀತಿ ಧರಿಸುವ ಪೆಂಡೆಂಟ್ ಇದು ಬಹಳ ಕಾಲದಿಂದಲೂ ಬಳಕೆಯಲ್ಲಿದ್ದು ಈಗಲೂ ಚಾಲ್ತಿಯಲ್ಲಿದೆ. ಪೆಂಡೆಂಟ್‌ನಲ್ಲಿ ಬೇರೆ ಬೇರೆ ಸರವನ್ನು ಪೋಣಿಸಿ ಧರಿಸುವಂತಹ ರಿಂಗ್ ಇದ್ದು ಯಾವ ಸರವನ್ನೂ ಬಳಸಬಹುದು. ಆದರೆ ಇದರ ವಿ ರಿಂಗ್ ಗಟ್ಟಿಯಾಗಿರಬೇಕು, ಪೆಂಡೆಂಟ್‌ನ ಗಾತ್ರ ಹೊಂದಿಕೊಂಡು ಅದರ ಒಳಗಿನ ಜಾಗ ದಪ್ಪಗಿನ ಸರ, ಮುತ್ತಿನ ಸರ, ಕ್ರಿಸ್ಟಲ್ ಬೀಡ್ಸ್ ಒಳಗೊಂಡ ಸರ ಹೋಗುವಷ್ಟು ದೊಡ್ಡದಾಗಿದ್ದರೆ ಚೆನ್ನ. ಜೊತೆಗೆ ಸರದ ಎಸ್ ಹುಕ್ ಸಲೀಸಾಗಿ